ಕರ್ನಾಟಕ ವಿಧಾನಸಭೆ

355 ಶ್ರೀ ರೇವಣ್ಣ ಹೆಚ್.ಡಿ.(ಹೊಳೇನರಸೀಪುರ)
ಮುಖ್ಯಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೊಸ ಬಡಾವಣೆಗಳನ್ನು ನಿರ್ಮಿಸಲು ಯೋಜನೆಯನ್ನು ಸಿದ್ಧಪಡಿಸಲಾಗಿದೆಯೇ; ಹಾಗಿದ್ದಲ್ಲಿ, ನಿರ್ಮಿಸಲಾಗುವ ಬಡಾವಣೆಗಳೆಷ್ಟು;

ಹೌದು.

ಪ್ರಾಧಿಕಾರದಿಂದ 5 ಹೊಸ ಬಡಾವಣೆಗಳನ್ನು ನಿರ್ಮಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಆ) ಉದ್ದೇಶಿತ ಹೊಸ ಬಡಾವಣೆಗಳಿಗಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗಿರುವ ಅಗತ್ಯ ಜಮೀನಿನ ಮಾಹಿತಿ ಒದಗಿಸುವುದು; ಈಗಾಗಲೇ ಬಡಾವಣೆಗಳಿಗಾಗಿ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ;

ಉದ್ದೇಶಿತ ಐದು ಹೊಸ ಬಡಾವಣೆಗಳಿಗಾಗಿ ಒಟ್ಟು 15,277 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವಿದೆ. ಈಗಾಗಲೇ ನಾಡಪ್ರಭು ಕೆಂಪೇಗೌಡ ಬಡಾವಣೆಗಾಗಿ 4814 ಎಕರೆ 15 ಗುಂಟೆ ಮತ್ತು ಡಾ:ಕೆ. ಶಿವರಾಮಕಾರಂತ ಬಡಾವಣೆಗಾಗಿ 3546 ಎಕರೆ 12 ಗುಂಟೆ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಇದರಲ್ಲಿ ನಾಡಪ್ರಭು ಕೆಂಪೇಗೌಡ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆ ಹೊರಡಿಸುವ ಹಂತದಲ್ಲಿದೆ.

ಇನ್ನೂ ಮೂರು ಹೊಸ ಬಡಾವಣೆಗಳಾದ ಶ್ರೀ ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ, ಶ್ರೀ ಡಿ. ದೇವರಾಜ ಅರಸು ಬಡಾವಣೆ ಮತ್ತು ಎಸ್.ನಿಜಲಿಂಗಪ್ಪ ಬಡಾವಣೆಗಳಿಗೆ ಬೆಂಗಳೂರು ನಗರದ ಸುತ್ತಮುತ್ತ ಅಂದರೆ ಹಳೇ ಮದ್ರಾಸ್ ರಸ್ತೆಯಿಂದ ಹೊಸೂರು ರಸ್ತೆ ಮಧ್ಯಭಾಗದಲ್ಲಿ ಬರುವ 27 ಗ್ರಾಮಗಳ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದು, ಭೂಸ್ವಾಧೀನ ಪ್ರಕ್ರಿಯೆಗೆ ಪ್ರಾರಂಭಿಕ ಅಧಿಸೂಚನೆಯನ್ನು ಹೊರಡಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಸ್ವಾಧೀನಪಡಿಸಿಕೊಳ್ಳಬಹುದಾದ ಜಮೀನಿನ ಅಗತ್ಯ ಮಾಹಿ ಕೆಳಕಂಡಂತಿರುತ್ತದೆ:-

ಅ) ನಾಡಪ್ರಭು ಕೆಂಪೇಗೌಡ ಬಡಾವಣೆ	4814-15
ಆ)ಡಾ:ಕೆ.ಶಿವರಾಮ ಕಾರಂತ ಬಡಾವಣೆ	3546-12
ಇ)ಶ್ರೀ ಕ್ಯಾಸಂಬಳ್ಳಿ ಚಂಗಲ ರಾಯರೆಡ್ಡಿ ಬಡಾವಣೆ	2134-18.5
ಈ)ಶ್ರೀ ಡಿ.ದೇವರಾಜ ಅರಸ್ ಬಡಾವಣೆ	1976-02
ಉ)ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ	2806-09
ಒಟ್ಟು	**15277-14.7**

ಈವರೆವಿಗೂ ಮೇಲಿನ ಐದು ಹೊಸ ಬಡಾವಣೆಗಳಿಗೆ ಯಾವುದೇ ಜಮೀನನ್ನು ವಶಪಡಿಸಿಕೊಂಡಿರುವುದಿಲ್ಲ.

ಇ) ಪ್ರತಿ ಎಕರೆಗೆ ರೈತರಿಗೆ ನೀಡಿರುವ ಪರಿಹಾರ ಮೊತ್ತವೆಷ್ಟು; ಪರಿಹಾರವಾಗಿ ಶೇ.60–40 ಅನುಪಾತದಲ್ಲಿ ರೈತರಿಗೆ ನಿವೇಶನಗಳನ್ನು ನೀಡಲಾಗುವುದೇ ಅಥವಾ ಪರಿಹಾರ ಮೊತ್ತವನ್ನು ಪೂರ್ಣ ಪ್ರಮಾಣದ ನಗದು ರೂಪದಲ್ಲಿ ನೀಡಲಾಗುವುದೇ; ಈ ಬಗ್ಗೆ ಪರಿಹಾರ ಕ್ರಮದ ವಿವರಗಳನ್ನು ಒದಗಿಸುವುದು;

ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿಲ್ಲವಾದ್ದರಿಂದ ಯಾವುದೇ ಪರಿಹಾರವನ್ನು ಈವರೆವಿಗೂ ಭೂಮಾಲೀಕರಿಗೆ ಪಾವತಿಸಿರುವುದಿಲ್ಲ. ಆದರೆ, ಭೂಸ್ವಾಧೀನಕ್ಕೆ ಒಳಪಡುವ ಒಟ್ಟು ಜಮೀನಿನ ಪೈಕಿ ಶೇ.45 ರಷ್ಟು ಭಾಗದಲ್ಲಿ ಮೂಲಭೂತ ಸೌಕರ್ಯ, ಇತ್ಯಾದಿಗಳಿಗೆ ಉಪಯೋಗಿಸಲಾಗುವುದು. ಉಳಿಕೆ ಶೇ.55ರಷ್ಟು ಭಾಗದಲ್ಲಿ ಅಭಿವೃದ್ಧಿಪಡಿಸಲಾಗುವ ಜಮೀನಿನಲ್ಲಿ ಶೇ.40 ರಷ್ಟು ಭಾಗವನ್ನು (ಅಂದರೆ ಪ್ರತಿ ಎಕರೆ ಜಮೀನಿಗೆ 9583 ಚ.ಅಡಿ ಅಭಿವೃದ್ಧಿಪಡಿಸಿದ ನಿವೇಶನವನ್ನು ಅಥವಾ ಪರಿಹಾರ ಧನ ಮತ್ತು ಅಭಿವೃದ್ಧಿಪಡಿಸಿದ ನಿವೇಶನ ಎರಡನ್ನೂ ಪಡೆಯಲು ಅರ್ಹರಿರುತ್ತಾರೆ) ನಿವೇಶನ ರೂಪದಲ್ಲಿ ಭೂಮಾಲೀಕರಿಗೆ ಪರಿಹಾರವಾಗಿ ನೀಡಲಾಗುವುದು. ಉಳಿಕೆ ಶೇ.60 ರಷ್ಟು ಅಭಿವೃದ್ಧಿಪಡಿಸಲಾಗುವ ನಿವೇಶನಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಭಾಗವಾಗಿದ್ದು, ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

ಈ) ಈ ಬಡಾವಣೆಗಳಲ್ಲಿ ನಿರ್ಮಿಸಲಾಗುವ ಒಟ್ಟು ನಿವೇಶನಗಳು ಎಷ್ಟು; ಈ ಪೈಕಿ ಬಡವರಿಗೆ ಹಾಗೂ ಕಡಿಮೆ ಆದಾಯ ಇರುವರಿಗೆ ನೀಡಲಾಗುವ ನಿವೇಶನಗಳು ಎಷ್ಟು; ಮಾಹಿತಿ ನೀಡುವುದು?

5 ಹೊಸ ಬಡಾವಣೆಗಳಲ್ಲಿ ಒಟ್ಟು 1,68,065 ನಿವೇಶನಗಳನ್ನು ರಚಿಸಲು ಉದ್ದೇಶಿಸಲಾಗಿದ್ದು, ಇವುಗಳಲ್ಲಿ 12,000 ನಿವೇಶನಗಳನ್ನು ಬಡವರಿಗೆ ಹಾಗೂ ಕಡಿಮೆ ಆದಾಯ ಇರುವವರಿಗೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

ಕರ್ನಾಟಕ ವಿಧಾನಸಭೆ

357 ಶ್ರೀ ಸಂಪಂಗಿ.ಎನ್(ಬಾಗೇಪಲ್ಲಿ)

ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು

ಅ) ಚಿತ್ರಾವತಿ ನದಿಗೆ ಅಡ್ಡಲಾಗಿ ಪರಗೋಡು ಹತ್ತಿರ ಕುಡಿಯುವ ನೀರಿಗೆ ಬ್ಯಾರೆಜ್ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.